MYSORE LEGISLATIVE ASSEMBLY

Monday, 19th April 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Transfer of Gazetted Officers of Revenue Department in Tumkur District.

*Q.—534. Sri ANDANAIAH (Kunigal).—

Will the Government be pleased to state :—

(*a*) the number of Gazetted Officers transferred within one year in Tumker district in Revenue Department during the years 1964 and 1965 up-to-date ;

(*b*) the reasns for such transfer within that short period

A.—Sri M. V. KRISHNAPPA (Minister for Revenue).—

(*a*) 6 in 1964.
3 in 1965.

9 (in all)

(*b*) The transfers were made in some cases on administrative grounds in the interest of Public Service and in others on account of promotion of some officers.

ಶ್ರೀ ಅಂದಾನಯ್ಯ.—ಒಟ್ಟು 9 ಜನ ಅಧಿಕಾರಿಗಳ ಪೈಕಿ ಪ್ರಮೋಷನ್ ಆಗಿರುವವರು ಎಷ್ಟು ಜನ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದರಲ್ಲಿ ಪ್ರಮೋಷನ್ ಬರುವುದಿಲ್ಲ. ಇಬ್ಬರು ತಹಶೀಲ್ದಾರರನ್ನು ಮಾತ್ರ ಟ್ರೇನಿಂಗಿಗೆ ಕಳಿಸಬೇಕಾಗಿತ್ತು. ಅವರನ್ನು ಟ್ರೇನಿಂಗಿಗೆ ಕಳಿಸಲಾಗಿದೆ. ಅದರ ವಿವರ ಈ ರೀತಿ ಇದೆ. ಶ್ರೀ ಕೇಳವಾಡಿ ಅವರನ್ನು ಹೊಸದಾಗಿ ರಚನೆಯಾದ ಪುಡ್ ಡಿಪಾರ್ಟ್‌ಮೆಂಟಿಗೆ ತೆಗೆದು ಕೊಂಡಿದೆ. ಶ್ರೀ ಶಿವಲಿಂಗಯ್ಯ ಅವರನ್ನು ಸರ್ವೆ ಸೆಟಲ್‌ಮೆಂಟ್ ಕೆಲಸ ಪ್ರಾರಂಭವಾದ್ದರಿಂದ ಅಲ್ಲಿಗೆ ತೆಗೆದುಕೊಳ್ಳಲಾಯಿತು. ಈ ಇಲಾಖೆಯಲ್ಲಿ ಅವರು ಮೊದಲು ಕೆಲಸ ಮಾಡಿದ್ದರಿಂದ ಅವರನ್ನು ತೆಗೆದುಕೊಳ್ಳಬೇಕಾಯಿತು. ಶ್ರೀ ಕೆ. ಮೈಲಾರಪ್ಪ ಅವರನ್ನು ಟ್ರೇನಿಂಗಿಗೆ ಕಳಿಸಲಾಗಿದೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಶ್ರೀ ಬಿ. ಎನ್. ವೆಂಕಟರಾಜು ಚ್ರೈನಿಂಗಿಗೆ ಕಳಿಸರಾಗಿದೆ. ಶ್ರೀ ಕೆ. ಆರ್. ಶಂಕರನಾರಾಯಣ ರಾವ್ ಮಧುಗಿರಿಯಲ್ಲಿ ಕೆಲಸ ಮಾಡಿದ್ದರಿಂದ ಸೆಟ್ಲ್‌ಮೆಂಟ್ ಆಫೀಸರ್ ಎಂದು ತೆಗೆದುಕೊಳ್ಳರಾಗಿದೆ, ಶ್ರೀ ಬನವರಾಜ ಅರನು ಅವರನ್ನು ಹರಪನಹಳ್ಳಿ ತಾಲ್ಲೂಕಿಗೆ ಟ್ರಾನ್ಸ್‌ಫರ್ ಆಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ತುಮಕೂರು ಜಿಲ್ಲೆಯ ಅಧಿಕಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸದಾಗಿ ಸೆಟ್ಲ್‌ಮೆಂಟ್ ಕೆಲಸ ಪ್ರಾರಂಭವಾದುದರಿಂದ ನೂರಾರು ಅಧಿಕಾರಿಗಳ ಅವಶ್ಯಕತೆ ಇದ್ದಿತು. ಅನೇಕ ಅಧಿಕಾರಿಗಳನ್ನು ತೆಗೆದುಕೊಂಡಿದೆ, ಈ ಡಿಸ್ಟ್ರಿಕ್ಟ್‌ನಿಂದ 9 ಜನರನ್ನು ಮಾತ್ರ ತೆಗೆದುಕೊಂಡಿದೆ. ಬೇರೆ ಜನಗಳನ್ನು ಸಹ ತೆಗೆದುಕೊಂಡಿದೆ.

ಶ್ರೀ ಅಂದಾನಯ್ಯ.—ಅಸಿಸ್ಟೆಂಟ್ ಕಮಿಷನರ್ ಶ್ರೀ ಕೇಳವಾಡಿಯವರು ತುಮಕೂರಿಗೆ ಬಂದು ಎಷ್ಟು ದಿವಸವಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಫುಡ್ ಡಿಪಾರ್ಟ್‌ಮೆಂಟಿಗೆ ಯಂಗ್ ಆಂಡ್ ಎನರ್ಜಿಟಿಕ್ ಇರುವ ಮತ್ತು ಆನೆಸ್ಟ್ ಆಗಿ ಕೆಲಸ ಮಾಡತಕ್ಕಂಥ ಯುವಕರು ಅಗತ್ಯವಾಗಿತ್ತು. ಅವರ ಬಗ್ಗೆ ನನಗೆ ಸ್ವತಃ ಗೊತ್ತಿದೆ. ಹೊಸದಾಗಿ ಪ್ರಾರಂಭವಾದ ಫುಡ್ ಡಿಪಾರ್ಟ್‌ಮೆಂಟಿಗೆ ಇಂಥ ಯುವಕ ಅಧಿಕಾರಿಯನ್ನು ತೆಗೆದುಕೊಂಡರೆ ಒಳ್ಳೆಯದು ಎಂದು ನನಗೆ ಅನ್ನಿಸಿತು.

Sri C. J. MUCKANNAPPA.—Is it not a fact that the Government was compelled to transfer him because he did not pull on well with the Minister coming from that area ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದಕ್ಕೆ ಸಂಬಂಧವಿಲ್ಲ.

ಶ್ರೀ ಜಿ. ಮಾದೇಗೌಡ.—ಈ ಗೆಜೆಟೆಡ್ ಅಧಿಕಾರಿಗಳನ್ನು ಬದಲಾವಣೆ ಮಾಡತಕ್ಕವರು ಯಾರು?

ಶ್ರೀ ಎಂ. ವಿ. ಕೃಷ್ಣಪ್ಪ.—ಚೀಫ್ ಮಿನಿಸ್ಟರ್, ರೆವೆನ್ಯೂ ಮಿನಿಸ್ಟರ್ ಮತ್ತು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವರ್ಷದ ಮಧ್ಯದಲ್ಲಿ ಚೇಂಜ್ ಮಾಡಬಾರದು ಎಂದು ಅವರು ಚೀಫ್ ಮಿನಿಸ್ಟರ್ ಅವರಿಗೆ ರಿಪ್ರೆಜೆಂಟೇಷನ್ ಕೊಟ್ಟಿದ್ದರು. ಆದರೆ ಅದನ್ನು ಕನ್‌ಸಿಡರ್ ಮಾಡುವಾಗ್ಗೆ ರಾ ಮಿನಿಸ್ಟರ್ ಅವರು ಅದಕ್ಕೆ ಒಪ್ಪಲಿಲ್ಲ, ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಫುಡ್ ಡಿಪಾರ್ಟ್‌ಮೆಂಟಿಗೆ ಟ್ರಾನ್ಸ್‌ಫರ್ ಮಾಡಿದ್ದು. ಬೇರೆ ಉದ್ದೇಶ ಏನೂ ಇರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಐ. ಎ. ಎಸ್. ಮತ್ತು ಎಂ. ಎ. ಎಸ್. ಅಧಿಕಾರಿಗಳನ್ನು ಜಿ. ಎ. ಡಿ. ಮತ್ತು ಚೀಫ್ ಸೆಕ್ರೆಟರಿಯವರು ಟ್ರಾನ್ಸ್‌ಫರ್ ಮಾಡುತ್ತಾರೆ ಎಂಬುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೂಲ್ಸ್ ಪ್ರಕಾರ ಮತ್ತು ಕನ್‌ವೆನ್‌ಷನ್ ಪ್ರಕಾರ ಮಾಡರಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಎರಡು ವರ್ಷಗಳಿಗಿಂತ ಮುಂಡೆ ಅಧಿಕಾರಿಗಳನ್ನು ವರ್ಗ ಮಾಡುವಾಗ್ಗೆ ಆ ಫೈಲು ಚೀಫ್ ಮಿನಿಸ್ಟರ್ ಕಡೆಗೆ ಹೋಗಬೇಕು ಅವರ ಅಪ್ರೂವರ್ ತೆಗೆದುಕೊಂಡು ವರ್ಗ ಮಾಡಬೇಕು ಎಂದು ಸರಕಾರದ ಥೋರಣ್ ಇದೆ ಎಂಬುದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು.

ಶ್ರೀ ಎಸ್. ಎಂ. ಕೃಷ್ಣ.—ಅಂಥ ಅಧಿಕಾರಿಗಳನ್ನು ಎಷ್ಟೋ ಸಾರೆ ಟ್ರಾನ್ಸ್‌ಫರ್ ಮಾಡುವಾಗ್ಗೆ ಸರಕಾರದ ನೀತಿ ಏನು ಇದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೊಸದಾಗಿ ಪ್ರಾರಂಭವಾದ ಫುಡ್ ಇಲಾಖೆಗೆ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಬೇಕಾಯಿತು. ಇದಲ್ಲದೆ ಸರ್ವೆ ಸೆಟ್ಲ್‌ಮೆಂಟ್ ಕೆಲಸ ಪ್ರಾರಂಭವಾಯಿತು. ಗವರ್ನಮೆಂಟ್ ಆಫ್ ಇಂಡಿಯಾದ ಫುಡ್ ಕಾರ್ಪೊರೇಷನ್ ಅವರು ನಮ್ಮ ಆಫೀಸರ್‌ಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಇಂಥ ಸಂದರ್ಭದಲ್ಲಿ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ತುಮಕೂರು ಅಸಿಸ್ಟೆಂಟ್ ಕಮಿಷನರ್‌ರನ್ನು ಟ್ರಾನ್ಸ್‌ಫರ್ ಮಾಡಬಾರದು, ಟ್ರಾನ್ಸ್‌ಫರ್ ಆರ್ಡರ್ ಕ್ಯಾನ್ಸರ್ ಮಾಡಬೇಕೆಂದು ಎಷ್ಟು ರಿಪ್ರೆಜೆಂಟೇಷನ್ಸ್ ಬಂದಿದ್ದವು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅನೇಕರು ಹಾಗೆ ಬರೆಯುತ್ತಾರೆ. ಮಾನ್ಯ ಸದಸ್ಯರೂ ಕೂಡ ಎರಡೂ ಕಡೆಯಿಂದ ಬರೆಯುತ್ತಾರೆ.

———